SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

ಕನ್ನಡಪ್ರಭ

Online Newspaper Clipping Service
Dtd- Sunday, 24th, March- 2019
Page No.04

# ಡಿಜಿಟಲ್ ಚಿಕಿತ್ಸೆಗೆ ವೈದ್ಯರು ಒತ್ತು ನೀಡಲಿ

## ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಘಟಿಕೋತ್ಸವದಲ್ಲಿ ಡಾ.ಬಿ.ಎನ್.ಗಂಗಾಧರ್ ಸಲಹೆ

• **ಕನ್ನಡಪ್ರಭ ವಾರ್ತೆ** ಕೋಲಾರ

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಪ್ರತಿ ಕ್ಷೇತ್ರದಲ್ಲೂ ಸಾಕಷ್ಟು ಮುಂದುವರೆದಿದೆ. ರೋಗಿಗಳಿಗೆ ಡಿಜಿಟಲ್ ಚಿಕಿತ್ಸೆ ನೀಡಲು ಒತ್ತು ನೀಡಿದಾಗ ರೋಗಿ ಬೇಗ ಗುಣಮುಖರಾಗಲು ಸಹಕಾರಿ ಯಾಗಲಿದ್ದು, ಇದಕ್ಕೆ ವೈದ್ಯರು ಒತ್ತು ನೀಡಬೇಕಾದ ಅಗತ್ಯವಿದೆ ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಿರ್ದೇಶಕ ಡಾ.ಬಿ.ಎನ್.ಗಂಗಾಧರ್ ತಿಳಿಸಿದರು.

ನಗರದಲ್ಲಿ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಿಂದ ನಡೆದ ಸಂಸ್ಥೆಯ 9ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿ, ಸದ್ಯಕ್ಕೆ ಕೆಲ ಆಸ್ಪತ್ರೆಗಳಲ್ಲಿ ಡಿಜಿಟಲ್ ಚಿಕಿತ್ಸೆ ನೀಡಲಾಗುತ್ತಿದ್ದು, ಸಾರ್ವಜನಿಕರಿಂದಲೂ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ ಎಂದರು.

**ಚಿಕಿತ್ಸೆ ಕುರಿತು ವೈದ್ಯರಿಗೇ ಸಂಶಯ:** ಡಿಜಿಟಲ್ ಆರೋಗ್ಯದ ಬಗ್ಗೆ ಈಗಲೂ ಕೆಲವು ವೈದ್ಯರು ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಸ್ಥಳೀಯ ಆಸ್ಪತ್ರೆಯಲ್ಲಿ ಕುಳಿತುಕೊಂಡು ಆನ್‌ಲೈನ್ ಮೂಲಕ ತಜ್ಞರನ್ನು ಸಂಪರ್ಕಿಸಿ ರೋಗಿಗೆ ಚಿಕಿತ್ಸೆ ನೀಡುವುದರಿಂದ ಕಾಯಿಲೆ ನಿವಾರಣೆ ಯಾಗುತ್ತದೆ. ಈ ಚಿಕಿತ್ಸೆ ಸುಲಭವಾಗಿಯೂ ಸಿಗುತ್ತದೆ ಎಂದು ಹೇಳಿದರು.

ವೈದ್ಯಕೀಯ ಕ್ಷೇತ್ರದಲ್ಲೂ ತಂತ್ರಜ್ಞಾನ ಬಳಕೆ ಮಾಡಿ ಹೊಸ ಹೊಸ ಆವಿಷ್ಕಾರ, ಸಂಶೋಧನೆಗಳಿಗೆ ಅನುವು ಮಾಡಿ ಕೊಡಲಾಗುತ್ತಿದೆ. ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳು ಇದರ ಅರಿವು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

**ವೈದ್ಯರಿಗೆ ಸೇವೆಯೇ ಗುರಿಯಾಗಬೇಕು:** ಯಾವುದೇ ಒಬ್ಬ ವೈದ್ಯ ಸೇವಾ ಮನೋಭಾವದಿಂದ ವೃತ್ತಿಗೆ ಸೇರಬೇಕು. ಹಣಗಳಿಕೆ ಮಾಡುವ ಉದ್ದೇಶಕ್ಕೆ ಸೇವೆ ಸಲ್ಲಿಸಿದರೆ ಸಮಾಜದಲ್ಲಿ ಗೌರವ ಸಿಗುವುದಿಲ್ಲ. ವೈದ್ಯಕೀಯ ಕ್ಷೇತ್ರದಲ್ಲೂ ಅನೇಕ ವಿಭಾಗಗಳು ಇವೆ. ವಿದ್ಯಾರ್ಥಿಗಳು ಪದವಿಗೆ ಸೇರುವ ಮೊದಲು ಜನಕ್ಕೆ ಉಪಯೋಗುವ ವಿಭಾಗ ಆಯ್ಕೆ ಮಾಡಿಕೊಳ್ಳಬೇಕು. ಈಗ ಬೇಡಿಕೆ ಇರುವ ವೈದ್ಯಕೀಯ ವಿಭಾಗವನ್ನು ಆಯ್ಕೆ ಮಾಡಿಕೊಂಡರೆ ಉತ್ತಮ ಎಂದರು.

### ವೈದ್ಯರೂ ಬಳಸಲಿ

- ಬದಲಾಗುತ್ತಿರುವ ತಂತ್ರಜ್ಞಾನ ವೈದ್ಯರೂ ಬಳಸಿಕೊಳ್ಳಲಿ
- ಡಿಜಿಟಲ್ ಚಿಕಿತ್ಸೆ ಕುರಿತು ವೈದ್ಯರಿಗೇ ಸಂಶಯ
- ವೈದ್ಯಕೀಯ ವಿದ್ಯಾರ್ಥಿಗಳಿಗೆ ಡಿಜಿಟಲ್ ಚಿಕಿತ್ಸೆ ಅರಿವು ಅಗತ್ಯ
- ವೈದ್ಯರಿಗೆ ಹಣ ಸಂಪಾದನೆಗಿಂತ ಸೇವೆ ಮುಖ್ಯವಾಗಲಿ



ಯೋಗಾಭ್ಯಾಸದಿಂದ ಮಿದುಳಿನ ನರಕೋಶಗಳು ಚುರುಕಾಗಿ ಕೆಲಸ ಮಾಡುತ್ತವೆ.

ಯೋಗದಿಂದ ಆಗುವ ಉಪಯೋಗಗಳ ಬಗ್ಗೆ ಅಧ್ಯಯನ ನಡೆಸಲು ನಿಮ್ಹಾನ್ಸ್‌ನಲ್ಲಿ ಪ್ರತ್ಯೇಕ ವಿಭಾಗವನ್ನು ಸ್ಥಾಪಿಸ ಲಾಗಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು.

**ಯೋಗಾಭ್ಯಾಸವೂ ಔಷಧವಿದ್ದಂತೆ:** ಈಗ ಯೋಗ ಅಭ್ಯಾಸವೂ ಹಲವು ಕಾಯಿಲೆಗಳಿಗೆ ಔಷಧಿಯಾಗಿದೆ. ಆಧುನಿಕ ಹಾಗೂ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳಲ್ಲಿ ತೊಡಗಿಸಿಕೊಂಡಿರುವ ಕೆಲ ವೈದ್ಯರು ನಾವೇ ಶ್ರೇಷ್ಠ ಎಂದು ಭಾವಿಸಿಕೊಳ್ಳುತ್ತಿದ್ದಾರೆ. ಎಲ್ಲ ಪದ್ಧತಿಗಳ ಮೂಲಕ ಉದ್ದೇಶ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದೇ ಆಗಿದೆ. ಚಿಕಿತ್ಸಾ ಪದ್ಧತಿ ಯಾವುದೇ ಇರಲಿ, ಎಲ್ಲರನ್ನು ವೈದ್ಯರೆಂದೇ ಪರಿಗಣಿಸಬೇಕು' ಎಂದು ಸಲಹೆ ನೀಡಿದರು.

ಆರ್.ಎಲ್.ಜಾಲಪ್ಪ ಅವರು ಶೈಕ್ಷಣಿಕ, ರೋಗ್ಯ ಸೇವೆ ನೀಡುವತ್ತಿರುವ ಮೂಲಕ ಜನರ ಮನೆಮಾತಾಗಿದ್ದಾರೆ. ಅವರು ನೀಡಿರುವ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳುವ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್, ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಉಪ ಕುಲಪತಿ (ಪ್ರಭಾರ) ಡಾ.ಎ.ವಿ.ಎಂ.ಕುಟ್ಟಿ, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ಸಂಸ್ಥೆಯ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸಿ.ಮುನಿನಾರಾಯಣ ಹಾಜರಿದ್ದರು.

ವಿಜಯವಾಣಿ



# 217 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

## ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ 9ನೇ ಘಟಿಕೋತ್ಸವ

■ ವಿಜಯವಾಣಿ ಸುದ್ದಿಜಾಲ ಕೋಲಾರ

ನಗರದಲ್ಲಿ ಶ್ರೀ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಿಂದ ನಡೆದ 9ನೇ ಘಟಿಕೋತ್ಸವದಲ್ಲಿ 217 ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ವೈದ್ಯಕೀಯ ಕ್ಷೇತ್ರದಲ್ಲೂ ತಂತ್ರಜ್ಞಾನ ದಾಪುಗಾಲಿಡುತ್ತಿರುವುದರಿಂದ ವೈದ್ಯರು ಇದರ ಪ್ರಯೋಜನ ಪಡೆದುಕೊಂಡು ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ಬದ್ಧತೆ ತೋರಬೇಕೆಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಿರ್ದೇಶಕ ಡಾ.ಬಿ.ಎನ್. ಗಂಗಾಧರ್ ತಿಳಿಸಿದರು.

» ಗುಣಮಟ್ಟದ ಚಿಕಿತ್ಸೆ ನೀಡಲು ಬದ್ಧತೆ ಇರಲಿ

ವೈದ್ಯಕೀಯ ಕ್ಷೇತ್ರ ಆಯ್ಕೆ ಮಾಡಿಕೊಳ್ಳುವವರು ತತ್ವಗಳನ್ನು ಅಳವಡಿಸಿಕೊಳ್ಳುವುದು ಮುಖ್ಯ. ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವ ಸಲುವಾಗಿ ಮೊದಲು ತಾವುಗಳು ಪರಿಣತರಾಗಬೇಕೆಂದರು. ವೈದ್ಯರು ಯಾವುದೇ ಕಾರಣಕ್ಕೂ ಕಲಿಕೆ ನಿಲ್ಲಿಸಬಾರದು, ತಮ್ಮ ಬಳಿ ಬರುವ ರೋಗಿಗಳನ್ನು ಶಿಕ್ಷಕರೆಂದು ಪರಿಗಣಿಸಿ ಅವರಿಂದ ಸಿಗುವ ಮಾಹಿತಿ ಅನುಭವದ ಆಧಾರದ ಮೇಲೆ ಕೌಶಲ ಹೆಚ್ಚಿಸಿಕೊಂಡಾಗ ಶ್ರೇಷ್ಠ ವೈದ್ಯರಾಗಬಹುದು ಎಂದರು.

ರೋಗಿಗಳು ಮನೆಯಲ್ಲೇ ಚಿಕಿತ್ಸೆ ಪಡೆಯಲೆಂದು ಡಿಜಿಟಲ್ ಚಿಕಿತ್ಸಾ ವ್ಯವಸ್ಥೆ ಜಾರಿಗೆ ತರಲಾಗಿದೆ. ವೈದ್ಯರು ಈ ಬಗ್ಗೆ ಹೆಚ್ಚಿನ ಸಂಶೋಧನೆ ಮಾಡಿ ವಿವಿಧ ಕಾಯಿಲೆಗಳನ್ನು ಗುಣಪಡಿಸಲು ಪ್ರಯತ್ನ ಮಾಡಬೇಕೆಂದ ಅವರು, ಸದ್ಯಕ್ಕೆ ಕೆಲ ಆಸ್ಪತ್ರೆಗಳಲ್ಲಿ ಡಿಜಿಟಲ್ ಚಿಕಿತ್ಸೆ ನಡೆಯುತ್ತಿದ್ದು, ಸಾರ್ವಜನಿಕರಿಂದಲೂ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ ಎಂದರು.

ಯಾವುದೇ ಒಬ್ಬ ವೈದ್ಯ ಸೇವಾ ಮನೋಭಾವದಿಂದ ವೃತ್ತಿಗೆ ಸೇರಬೇಕು. ಹಣಗಳಿಕೆ ಮಾಡುವ ಉದ್ದೇಶಕ್ಕೆ ಸೇವೆ ಸಲ್ಲಿಸಿದರೆ ಸಮಾಜದಲ್ಲಿ ಗೌರವ ಸಿಗುವುದಿಲ್ಲ. ವೈದ್ಯಕೀಯ ಕ್ಷೇತ್ರದಲ್ಲೂ ಅನೇಕ ವಿಭಾಗಗಳು ಇವೆ. ವಿದ್ಯಾರ್ಥಿಗಳು ಪದವಿಗೆ ಸೇರುವ ಮೊದಲು ಜನರಿಗೆ ಉಪಯೋಗವಾಗುವ ವಿಭಾಗವನ್ನು ಆಯ್ಕೆ ಮಾಡಿಕೊಂಡು ಅನುಭವ ಸಂಪಾದಿಸಿದಾಗ ತಾನಾಗಿಯೇ ಅಭಿವೃದ್ಧಿ ಸಾಧಿಸಬಹುದಾಗಿದೆ ಎಂದರು. ಯೋಗಾಭ್ಯಾಸದಿಂದ ಮಿದುಳಿನ ನರಕೋಶಗಳು ಚುರುಕಾಗಿ ಕೆಲಸ ಮಾಡುತ್ತವೆ. ಯೋಗದಿಂದ ಆಗುವ ಉಪಯೋಗಗಳ ಬಗ್ಗೆ ಅಧ್ಯಯನ ನಡೆಸಲು ನಿಮ್ಹಾನ್ಸ್‌ನಲ್ಲಿ ಪ್ರತ್ಯೇಕ ವಿಭಾಗ ಸ್ಥಾಪಿಸಲಾಗಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು.

ಯೋಗಾಭ್ಯಾಸದಿಂದ ಈಗ ಹಲವು ಕಾಯಿಲೆಗಳನ್ನು ಗುಣಪಡಿಸಿಕೊಳ್ಳಬಹುದಾಗಿದೆ. ಆಧುನಿಕ ಹಾಗೂ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳಲ್ಲಿ ತೊಡಗಿಸಿಕೊಂಡಿರುವ ಕೆಲ ವೈದ್ಯರು ನಾವೇ ಶ್ರೇಷ್ಠ ಎಂದು ಭಾವಿಸಿಕೊಳ್ಳುತ್ತಿದ್ದಾರೆ. ಎಲ್ಲ ಪದ್ಧತಿಗಳ ಮೂಲ ಉದ್ದೇಶ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದೇ ಆಗಿದೆ. ಚಿಕಿತ್ಸಾ ಪದ್ಧತಿ ಯಾವುದೇ ಇರಲಿ, ರೋಗಿಗಳ ಹಿತ ಮುಖ್ಯ ಎಂದು ತಿಳಿಸಿದರು.

ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಿಂದ ಉಪ ಕುಲಪತಿ (ಪ್ರಭಾರ) ಡಾ.ಎ.ವಿ.ಎಂ.ಕುಟ್ಟಿ ಸಂಸ್ಥೆ ನಡೆದು ಬಂದ ಹಾದಿ ವಿವರಿಸಿದರು. ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್, ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ಸಂಸ್ಥೆಯ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸಿ.ಮುನಿನಾರಾಯಣ, ಆರ್.ಎಲ್.ಜಾಲಪ್ಪ ಆಸ್ಪತ್ರೆಯ ಕಾರ್ಯದರ್ಶಿ ಜಿ.ಹೆಚ್.ನಾಗರಾಜು ಉಪಸ್ಥಿತರಿದ್ದರು.



ವಿಜಯವಾಣಿ ಚಿತ್ರಗಳು

ಕೋಲಾರದ ಶ್ರೀ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಿಂದ ನಡೆದ 9ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅರವಳಿಕೆ ಶಾಸ್ತ್ರ ವಿಭಾಗದಲ್ಲಿ ಚಿನ್ನದ ಪದಕ ಪಡೆದ ಕೋಲಾರದ ಡಾ. ಡಿ.ಜಿ. ನಿಖಿಲ ಅವರಿಗೆ ನಿಮ್ಹಾನ್ಸ್ ನಿರ್ದೇಶಕ ಡಾ.ಬಿ.ಎನ್. ಗಂಗಾಧರ್ ಪದಕ ಹಾಗೂ ಪದವಿ ಪ್ರದಾನ ಮಾಡಿದರು.



ಘಟಿಕೋತ್ಸವದಲ್ಲಿ ಪದವಿ ಸ್ವೀಕರಿಸಿದ ವಿದ್ಯಾರ್ಥಿಗಳು.

ಪ್ರಜಾವಾಣಿ







ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಿಮ್ಹಾನ್ಸ್ ನಿರ್ದೇಶಕ ಡಾ.ಬಿ.ಎನ್.ಗಂಗಾಧರ್ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿ, ವಿದ್ಯಾರ್ಥಿನಿಯರು (ಎಡ ಚಿತ್ರ). ಘಟಿಕೋತ್ಸವದಲ್ಲಿ ಚಿನ್ನದ ಪದಕ ಹಾಗೂ ಪದವಿ ಪ್ರಮಾಣಪತ್ರ ಪ್ರದಾನ ಮಾಡಿದರು.

## ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ನಿಮ್ಹಾನ್ಸ್ ನಿರ್ದೇಶಕ ಗಂಗಾಧರ್ ಕಿವಿಮಾತು

# ವೈದ್ಯಕೀಯ ವೃತ್ತಿಯಲ್ಲಿ ಮಾನವೀಯತೆ ಮುಖ್ಯ

ಪ್ರಜಾವಾಣಿ ವಾರ್ತೆ

ಕೋಲಾರ: 'ವೈದ್ಯಕೀಯ ವೃತ್ತಿಯಲ್ಲಿ ಹಣ ಸಂಪಾದನೆಗಿಂತ ಮಾನವೀಯತೆ ಮುಖ್ಯ. ಹಣಕ್ಕಿಂತ ಜೀವ ದೊಡ್ಡದು' ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಿರ್ದೇಶಕ ಡಾ.ಬಿ.ಎನ್.ಗಂಗಾಧರ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಇಲ್ಲಿ ಶನಿವಾರ ನಡೆದ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಘಟಿಕೋತ್ಸವದಲ್ಲಿ ಮಾತನಾಡಿ, 'ದೇಶದಲ್ಲಿ ವೈದ್ಯಕೀಯ ಕ್ಷೇತ್ರವು ಹಣ ಮಾಡುವ ದಂಧೆಯಾಗಿದೆ. ವೈದ್ಯರಿಗೆ ಸೇವಾ ಮನೋಭಾವ ಇಲ್ಲವಾಗಿದೆ. ವಿದ್ಯಾರ್ಥಿಗಳು ದೇಶದಲ್ಲಿ ವೈದ್ಯಕೀಯ ಪದವಿ ಪಡೆದು ಹಣ ಸಂಪಾದನೆಗಾಗಿ ವಿದೇಶಕ್ಕೆ ಹೋಗುತ್ತಿರುವುದು ವಿಷಾದಕರ' ಎಂದು ಕಳವಳ ವ್ಯಕ್ತಪಡಿಸಿದರು.

'ಡಿಜಿಟಲ್ ಚಿಕಿತ್ಸಾ ವಿಧಾನವು ರೋಗ ವಾಸಿಗೆ ಅತ್ಯುತ್ತಮ ವಿಧಾನವಾಗಿದೆ. ಕಾಯಿಲೆ ಬೇಗನೆ ಗುಣಪಡಿಸಲು ಈ ವಿಧಾನ ಸಹಕಾರಿಯಾಗಿದ್ದು, ವೈದ್ಯರು ಇದಕ್ಕೆ ಒತ್ತು ನೀಡುವ ಅಗತ್ಯವಿದೆ. ಸದ್ಯಕ್ಕೆ ಕೆಲವೇ ಆಸ್ಪತ್ರೆಗಳಲ್ಲಿ ಡಿಜಿಟಲ್ ಚಿಕಿತ್ಸೆ ಸೇವೆ ಲಭ್ಯವಿದ್ದು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ' ಎಂದರು.

'ಡಿಜಿಟಲ್ ಚಿಕಿತ್ಸಾ ವಿಧಾನದ ಬಗ್ಗೆ ಕೆಲ ವೈದ್ಯರು ಈಗಲೂ ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಸ್ಥಳೀಯ ಆಸ್ಪತ್ರೆಯಲ್ಲಿ ಕುಳಿತು ಆನ್‌ಲೈನ್ ಮೂಲಕ ತಜ್ಞರನ್ನು ಸಂಪರ್ಕಿಸಿ ರೋಗಿಗಳಿಗೆ ಚಿಕಿತ್ಸೆ ನೀಡುವುದರಿಂದ ಕಾಯಿಲೆ ವಾಸಿಯಾಗುತ್ತದೆ. ಈ ಚಿಕಿತ್ಸೆ ಸುಲಭವಾಗಿಯೂ ಸಿಗುತ್ತದೆ' ಎಂದು ವಿವರಿಸಿದರು.

'ಇತ್ತೀಚಿನ ವರ್ಷಗಳಲ್ಲಿ ಪ್ರತಿ ಕ್ಷೇತ್ರದಲ್ಲೂ ತಂತ್ರಜ್ಞಾನ ಸಾಕಷ್ಟು ಮುಂದುವರಿದಿದೆ. ವೈದ್ಯಕೀಯ ಕ್ಷೇತ್ರದಲ್ಲೂ ತಂತ್ರಜ್ಞಾನ ಬಳಕೆ ಮಾಡಿ ಹೊಸ ಆವಿಷ್ಕಾರ, ಸಂಶೋಧನೆಗೆ ಅನುವು ಮಾಡಿಕೊಡಲಾಗುತ್ತಿದೆ. ವೈದ್ಯಕೀಯ ವಿದ್ಯಾರ್ಥಿಗಳು ನೂತನ ತಂತ್ರಜ್ಞಾನ ಅರಿಯಬೇಕು' ಎಂದು ಸಲಹೆ ನೀಡಿದರು.

**ಗೌರವ ಸಿಗುವುದಿಲ್ಲ:** 'ವೈದ್ಯರು ಸೇವಾ ಮನೋಭಾವದಿಂದ ವೃತ್ತಿಗೆ ಸೇರಬೇಕು. ಹಣ ಗಳಿಕೆ ಉದ್ದೇಶಕ್ಕೆ ವೈದ್ಯರಾದರೆ ಸಮಾಜದಲ್ಲಿ ಗೌರವ ಸಿಗುವುದಿಲ್ಲ. ವೈದ್ಯಕೀಯ ಕ್ಷೇತ್ರದಲ್ಲೂ ಅನೇಕ ವಿಭಾಗಗಳಿವೆ. ವಿದ್ಯಾರ್ಥಿಗಳು ಪದವಿ ಕೋರ್ಸ್‌ಗೆ ಸೇರುವ ಮೊದಲು ಜನರಿಗೆ ಉಪಯೋಗುವ ವಿಭಾಗ ಆಯ್ಕೆ ಮಾಡಿಕೊಳ್ಳಬೇಕು' ಎಂದು ತಿಳಿಸಿದರು.

'ಈ ಹಿಂದೆ ಯೋಗವು ಸರ್ವಸಾಮಾನ್ಯರ ಜೀವನ ಪದ್ಧತಿಯಾಗಿತ್ತು. ಜೀವನ ಶೈಲಿಯಲ್ಲಿ ಹಾಸು ಹೊಕ್ಕಾಗಿತ್ತು. ದೇಶದ ಪರಂಪರೆಯಾಗಿ ಬೆಳೆದು ಬಂದ ಈ ಪದ್ಧತಿಯನ್ನು ಯಾರಿಗೂ ಹೇಳಿಕೊಡುವ ಅಗತ್ಯವಿರಲಿಲ್ಲ. ಯೋಗದಲ್ಲಿ ಮಾನವನನ್ನು ನಿರೋಗಿಯಾಗಿಸುವ ಶಕ್ತಿ ಅಡಗಿದೆ. ಯೋಗದ ಉಪಯೋಗದ ಬಗ್ಗೆ ಅಧ್ಯಯನ ನಡೆಸಲು ನಿಮ್ಹಾನ್ಸ್‌ನಲ್ಲಿ ಪ್ರತ್ಯೇಕ ವಿಭಾಗ ತೆರೆಯಲಾಗಿದೆ' ಎಂದು ವಿವರಿಸಿದರು.



ಘಟಿಕೋತ್ಸವದಲ್ಲಿ ನಿಮ್ಹಾನ್ಸ್ ನಿರ್ದೇಶಕ ಡಾ.ಬಿ.ಎನ್.ಗಂಗಾಧರ್ ಮಾತನಾಡಿದರು.

> ಯೋಗಾಭ್ಯಾಸದಿಂದ ಮಿದುಳಿನ ನರಕೋಶ ಚುರುಕಾಗಿ ಕೆಲಸ ಮಾಡುತ್ತದೆ. ಒತ್ತಡ ಮುಕ್ತ ಬದುಕು ರೂಪಿಸಿಕೊಳ್ಳಲು ಯೋಗಾಭ್ಯಾಸ ದಾರಿದೀಪ. ಯೋಗ ಜೀವನದ ಪರಿಪೂರ್ಣತೆ ದಾರಿ
>
> **-ಡಾ.ಬಿ.ಎನ್.ಗಂಗಾಧರ್**, ನಿಮ್ಹಾನ್ಸ್ ನಿರ್ದೇಶಕ

**ನೈಸರ್ಗಿಕ ಸಂಜೀವಿನಿ:** 'ಯೋಗ ಕಲೆಯು ಭಾರತದ ಪ್ರಾಚೀನ ಆರೋಗ್ಯ ಸಂರಕ್ಷಣೆಯ ನೈಸರ್ಗಿಕ ಸಂಜೀವಿನಿಯಾಗಿದೆ. ಆಧುನಿಕ ಹಾಗೂ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳಲ್ಲಿ ತೊಡಗಿಸಿಕೊಂಡಿರುವ ಕೆಲ ವೈದ್ಯರು ತಾವೇ ಶ್ರೇಷ್ಠವೆಂದು ಭಾವಿಸಿದ್ದಾರೆ. ಆದರೆ, ಎಲ್ಲಾ ಚಿಕಿತ್ಸಾ ಪದ್ಧತಿಗಳ ಮೂಲ ಉದ್ದೇಶ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದು. ಚಿಕಿತ್ಸಾ ಪದ್ಧತಿ ಯಾವುದೇ ಇರಲಿ, ಎಲ್ಲರನ್ನು ವೈದ್ಯರೆಂದೇ ಪರಿಗಣಿಸಬೇಕು' ಎಂದರು.

**ಪದಕ ಪ್ರದಾನ:** 217 ಮಂದಿ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಹಾಗೂ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಾದ ಡಾ.ಪಾಂಡೆ ಸ್ವಾತಿ, ಡಾ.ಡಿ.ಜಿ.ನಿಖಿಲಾ, ಡಾ.ಪ್ರಣವ್ ಗುಜಾಲಿ ಲಿಸ್ವನ್, ಡಾ.ಡಿ.ಎಸ್.ಅಪೂರ್ವ, ಡಾ.ಆರ್.ಪ್ರದೀಪ್ ಕೃಷ್ಣ, ಡಾ.ಅಭಿನಯ ರವಿಚಂದ್ರನ್ ಅವರಿಗೆ ಚಿನ್ನದ ಪದಕ ನೀಡಿ ಪುರಸ್ಕರಿಸಲಾಯಿತು.

ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಕುಲಪತಿ ಡಾ.ಎಸ್.ಕುಮಾರ್, ದೇವರಾಜ ಅರಸು ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಉಪ ಕುಲಪತಿ (ಪ್ರಭಾರ) ಡಾ.ಎ.ವಿ.ಎಂ.ಕುಟ್ಟಿ, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸಿ. ಮುನಿನಾರಾಯಣ ಪಾಲ್ಗೊಂಡಿದ್ದರು.

### ಮುಖ್ಯಾಂಶಗಳು

- ವೈದ್ಯಕೀಯ ಕ್ಷೇತ್ರ ಹಣ ಮಾಡುವ ದಂಧೆಯಾಗಿದೆ
- ವೈದ್ಯರಲ್ಲಿ ಸೇವಾ ಮನೋಭಾವ ಇಲ್ಲವಾಗಿದೆ
- ವಿದ್ಯಾರ್ಥಿಗಳು ನೂತನ ತಂತ್ರಜ್ಞಾನ ಅರಿಯಿರಿ

ಕೋಲಾರಪತ್ರಿಕೆ



ಅರಸು ವೈದ್ಯಕೀಯ ವಿ.ವಿ.ಯಲ್ಲಿ ೦೯ನೇ ಘಟಿಕೋತ್ಸವ ಸಂಭ್ರಮ:

# ಡಿಜಿಟಲ್ ಚಿಕಿತ್ಸೆಗೆ ಆದ್ಯತೆ ನೀಡಿ: ಡಾ||ಗಂಗಾಧರ್







ಕೋಲಾರ ಮಾ. ೨೩.

ತಾಂತ್ರಿಕತೆ ವೇಗವಾಗಿ ಬೆಳೆಯುತ್ತಿದ್ದು, ಡಿಜಿಟಲ್ ಆರೋಗ್ಯ ಎನ್ನುವುದು ಇಂದಿನ ನೈಜತೆಯಾಗಿದೆ. ರೋಗಿಗಳಿಗೆ ವೈದ್ಯಕೀಯ ಮಾಹಿತಿ ಸುಲಭವಾಗಿ ಆನ್‌ಲೈನ್‌ನಲ್ಲಿ ದೊರೆಯುತ್ತಿದೆ. ಆದರೆ ತಪ್ಪು ಮಾಹಿತಿಯೂ ಸಿಗುತ್ತಿರುವುದರಿಂದ ರೋಗಿಗಳು ವೈದ್ಯರನ್ನು ಅರ್ಥ ಮಾಡಿಕೊಳ್ಳುವಲ್ಲಿ ಎಡವುತ್ತಿದ್ದಾರೆ. ವೈದ್ಯರು ಎಚ್ಚರಿಕೆಯಿಂದ ಡಿಜಿಟಲ್ ಆರೋಗ್ಯ ತಂತ್ರಜ್ಞಾನವನ್ನು ರೋಗಿಗಳ ಹಿತ ದೃಷ್ಟಿಯಿಂದ ಬಳಸಬೇಕೆಂದು ಎಂದು ಪ್ರೊ.ಬಿ.ಎನ್. ಗಂಗಾಧರ್ ಅವರು ಸೂಚಿಸಿದರು.

ಟಮಕದ ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ೦೯ನೇ ಘಟಿಕೋತ್ಸವ ಭಾಷಣ ಮಾಡಿದ ಬೆಂಗಳೂರು ನಿಮ್ಹಾನ್ಸ್‌ನ ನಿರ್ದೇಶಕರಾದ ಶ್ರೀಯುತರು ಪ್ರೊಫೆಸರ್‌ಗಳು ಜೀವನ ಪರ್ಯಂತ ವಿದ್ಯಾರ್ಥಿಗಳಾಗಿ ವ್ಯಾಸಂಗ ಮಾಡುತ್ತಿರಬೇಕು. ರೋಗಿಯೇ ನಿಮ್ಮ ಮೊದಲ ಗುರುವಾಗಿದ್ದು, ಅವ

## ಜಿಲ್ಲಾ ಆಸ್ಪತ್ರೆಗಳು ಮೇಲ್ದರ್ಜೆಯಾದರೆ ನಿಮ್ಹಾನ್ಸ್‌ನ ಒತ್ತಡ ಕಡಿಮೆ: ನಿರ್ದೇಶಕ

ಕೋಲಾರ ಮಾ. ೨೩- ವಿಶೇಷ ತಜ್ಞ ಚಿಕಿತ್ಸೆಗೆ ರೋಗಿಗಳು ಬೆಂಗಳೂರು ನಿಮ್ಹಾನ್ಸ್ ಮತ್ತು ಇತರ ಆಸ್ಪತ್ರೆಗಳಿಗೆ ಬರುವುದನ್ನು ತಪ್ಪಿಸಿ, ಜಿಲ್ಲಾ ಕೇಂದ್ರಗಳಲ್ಲೇ ಒಳ್ಳೆಯ ಚಿಕಿತ್ಸೆ ದೊರೆಯುವಂತೆ ಮಾಡಬೇಕೆಂದೂ, ನಿಮ್ಹಾನ್ಸ್‌ನಲ್ಲಿನ ಒತ್ತಡ ಕಡಿಮೆ ಮಾಡಲು ಇಂಥ ಕ್ರಮ ಅಗತ್ಯವಿದೆಯೆಂದೂ ಡಾ|| ಬಿ.ಎನ್. ಗಂಗಾಧರ್ ಅಭಿಪ್ರಾಯ ಪಟ್ಟರು.

ಘಟಿಕೋತ್ಸವ ನಂತರ ಅನೌಪಚಾರಿಕವಾಗಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಮ್ಹಾನ್ಸ್‌ನಲ್ಲಿ ರೋಗಿಗಳಿಗೆ ಪ್ರವೇಶ ಸಿಗುತ್ತಿಲ್ಲವೆಂಬ ಪ್ರಶ್ನೆಗೆ ಉತ್ತರಿಸಿ, ಬೇರೆಡೆಯೂ ಇಂಥ ಆಸ್ಪತ್ರೆ ತೆರೆಯಬೇಕೆಂಬ ಅಭಿಪ್ರಾಯವಿದ್ದರೂ, ಹಾಲಿ ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಆದ್ಯತೆ ನೀಡುವುದಾಗಿ ಹೇಳಿದರು.

ಶ್ರೀನಿವಾಸಪುರದಲ್ಲಿ ೬೦ ವರ್ಷದ ಮೇಲ್ಪಟ್ಟವರ ನಡಾವಳಿಗಳಲ್ಲಿ ಆಗುವ ಬದಲಾವಣೆಗಳನ್ನು ಸಂಶೋಧಿಸಲಾಗುತ್ತಿದೆಯೆಂದೂ, ಇದು ಪೈಲಟ್ ಯೋಜನೆಯೆಂದೂ ಹೇಳಿದರು.

ಇತರ ಸಾಂಕ್ರಾಮಿಕವಲ್ಲದ ರೋಗಗಳಿವೆ, ಜಾಸ್ತಿಯಾಗಿಯೇ ಉಳಿದಿವೆ. ವೈದ್ಯರು ಈ ವಿಚಾರದಲ್ಲಿ ಹೆಚ್ಚಿಗೆ ಶ್ರಮಿಸಿ, ಸಮಾಜವೇ ಇನ್ನು ಆರೋಗ್ಯ ಕಾಪಾಡಿಕೊಳ್ಳುವಂತೆ ಮಾಡಬೇಕು ಇಂಥ ಜೀವನ ಶೈಲಿಯನ್ನು ಸುಧಾರಿಸಬೇಕೆಂದು ನಿಮ್ಹಾನ್ಸ್ ನಿರ್ದೇಶಕರು ಅಭಿಪ್ರಾಯಪಟ್ಟರು.

ವೈದ್ಯಕೀಯ ವಿದ್ಯಾರ್ಥಿಗಳು ಇತ್ತೀಚೆಗೆ ಸ್ತ್ರೀ ಮತ್ತು ಪ್ರಸೂತಿ ಕ್ಲಿನಿಕಲ್ ಸೇವೆಗಳ ಬಗ್ಗೆ ನಿರ್ಲಕ್ಷ್ಯ ತೋರಿಸುತ್ತಿದ್ದು ಇದು ಚಿಂತೆಗೆ ಈಡು ಮಾಡಿದೆ. ಮೂಲ ವಿಜ್ಞಾನದಲ್ಲಿ ಸಂಶೋಧನೆಯತ್ತ ಹೆಚ್ಚು ಗಮನಹರಿಸಬೇಕು ಎಂದು ಕರೆ ನೀಡಿದ ಶ್ರೀಯುತರು, ಆಧುನಿಕ ವೈದ್ಯ ಪದ್ಧತಿ ಜೊತೆಗೆ ಆಂತರಿಕವಾಗಿ ಯೋಗ, ಸಿದ್ಧ ಇತ್ಯಾದಿಗಳನ್ನು ಅರಿತು, ರೋಗಿಗಳ ಹಿತದೃಷ್ಟಿಯಿಂದ ಬಳಸಬೇಕು. ಬೇರೆಯವರಲ್ಲಿ ಒಳ್ಳೆಯದನ್ನು ಗುರುತಿಸಬೇಕು ಎಂದು ಅಭಿಪ್ರಾಯಿಸಿದರು.

ಕುಲಾಧಿಪತಿ ಡಾ|| ಎಲ್. ಕುಮಾರ್ ಅವರು ಪದವಿ ಪ್ರದಾನ ಮಾಡಿದರು. ಉಪಕುಲಪತಿ ಪ್ರೊ|| ಎ.ವಿ. ಎಂ. ಕುಟ್ಟಿ ವಿಶ್ವವಿದ್ಯಾಲಯದ ವರದಿವಾಚನ ಮಾಡಿದರು. ಪರೀಕ್ಷಾ ನಿಯಂತ್ರಣಾಧಿಕಾರಿ ಡಾ|| ಸಿ. ಮುನಿನಾರಾಯಣ ಘಟಿಕೋತ್ಸವ ಮೆರವಣಿಗೆ ನೇತೃತ್ವ ವಹಿಸಿದ್ದು, ಪದವಿ ಪಡೆದವರ ಹೆಸರುಗಳನ್ನು ಘೋಷಿಸಿದರು.

'ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ರಾಜೇಶ್ ಎನ್. ಜಗದಾಳೆ, ಪ್ರೊ|| ಚಾನ್ಸಲರ್ ಎನ್‌ಮಾರ್ಷಲ್ ಡಾ|| ಸಿ.ಕೆ. ರಂಜನ್, ಪ್ರಾಂಶುಪಾಲ ಡಾ|| ಶ್ರೀರಾಮುಲು, ಕುಲಸಚಿವ ಡಾ|| ಕೆ.ಎನ್.ವಿ. ಪ್ರಸಾದ್ ಮತ್ತಿತರರಿದ್ದರು.

ಟ್ರಸ್ಟ್ ಕಾರ್ಯದರ್ಶಿ ಜಿ.ಎಚ್. ನಾಗರಾಜು, ಬೋಧಕ ಸಿಬ್ಬಂದಿ, ಪೋಷಕರು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಮೊದಲ ಗುರುವಾಗಿದ್ದು, ಅವರಿಂದ ಕಲಿಯುವುದು ಸಾಕಷ್ಟು ಇರುತ್ತೆ. ಹಲವು ಕಾಣದ ಕೈಗಳು ನಮ್ಮ ಬೆಳವಣಿಗೆಯಲ್ಲಿ ನೆರವಾಗುತ್ತೆ ಎಂದು ನುಡಿದರು.

ವೈದ್ಯರು ತಮ್ಮ ವೃತ್ತಿಯಲ್ಲಿ ಎಂದೂ ನೈತಿಕತೆ ಬಿಟ್ಟು ಹೋಗಬಾರದು. ಎಲ್ಲ ಸಮಯದಲ್ಲೂ ರೋಗಿಗಳ ಹಕ್ಕನ್ನು ಗೌರವಿಸಿ ಎಂದ ಡಾ|| ಗಂಗಾಧರ್ ಈಗ ಎಲ್ಲರಿಗೂ ಶ್ರೇಷ್ಠ ಚಿಕಿತ್ಸೆ ದೊರೆಯುವಂತೆ ಆಯುಷ್ಮಾನ್ ಭಾರತ್ ಮತ್ತಿತರ ಯೋಜನೆಗಳಿಂದ ಸಾಧ್ಯವಾಗುತ್ತಿದೆ ಎಂದರು.

ಆಧುನಿಕ ಔಷಧಿಗಳು ಹಲವು ಮಾರಣಾಂತಿಕ, ಸಾಂಕ್ರಾಮಿಕ ಕಾಯಿಲೆಗಳನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದರೂ,

ಕೋಲಾರಶಕ್ತಿ



ದೇವರಾಯ ಅರಸು ವೈದ್ಯಕೀಯ ವಿವಿಯ 9ನೇ ವಾರ್ಷಿಕ ಘಟಿಕೋತ್ಸವ

# ಡಿಜಿಟಲ್ ಆರೋಗ್ಯ ಸೇವೆಗೆ ಜನತೆಯಿಂದ ಉತ್ತಮ ಸ್ಪಂದನೆ– ಡಾ.ಗಂಗಾಧರ್





ಕೋಲಾರ: ರೋಗಿಗಳಿಗೆ ಡಿಜಿಟಲ್ ಚಿಕಿತ್ಸೆ ನೀಡಲು ಒತ್ತು ನೀಡಿದಾಗ ಬೇಗ ಗುಣಮುಖರಾಗಲು ಸಹಕಾರಿಯಾಗಲಿದ್ದು, ಇದಕ್ಕೆ ವೈದ್ಯರು ಒತ್ತು ನೀಡಬೇಕಾದ ಅಗತ್ಯವಿದೆ ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಿರ್ದೇಶಕ ಡಾ.ಬಿ.ಎನ್. ಗಂಗಾಧರ್ ತಿಳಿಸಿದರು.

ನಗರದಲ್ಲಿ ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದಿಂದ ನಡೆದ ಸಂಸ್ಥೆಯ 9ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿ, ಸದ್ಯಕ್ಕೆ ಕೆಲ ಆಸ್ಪತ್ರೆಗಳಲ್ಲಿ ಡಿಜಿಟಲ್ ಚಿಕಿತ್ಸೆ ನಡೆಯುತ್ತಿದ್ದು, ಸಾರ್ವಜನಿಕರಿಂದಲೂ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ ಎಂದರು.

ಡಿಜಿಟಲ್ ಆರೋಗ್ಯದ ಬಗ್ಗೆ ಈಗಲೂ ಕೆಲಸ ವೈದ್ಯರು ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಸ್ಥಳೀಯ ಆಸ್ಪತ್ರೆಯಲ್ಲಿ ಕುಳಿತುಕೊಂಡು ಆನ್‌ಲೈನ್ ಮೂಲಕ ತಜ್ಞರನ್ನು ಸಂಪರ್ಕಿಸಿ ರೋಗಿಗೆ ಚಿಕಿತ್ಸೆ ನೀಡುವುದರಿಂದ ಕಾಯಿಲೆ ನಿವಾರಣೆ ಯಾಗುತ್ತದೆ. ಈ ಚಿಕಿತ್ಸೆ ಸುಲಭವಾಗಿಯೂ ಸಿಗುತ್ತದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಪ್ರತಿ ಕ್ಷೇತ್ರದಲ್ಲೂ ಸಾಕಷ್ಟು ಮುಂದುವರೆದಿದೆ. ವೈದ್ಯಕೀಯ ಕ್ಷೇತ್ರದಲ್ಲೂ ತಂತ್ರಜ್ಞಾನ ಬಳಕೆ ಮಾಡಿ ಹೊಸ ಹೊಸ ಆವಿಷ್ಕಾರ, ಸಂಶೋಧನೆಗಳಿಗೆ ಅನುವು ಮಾಡಿಕೊಡಲಾಗುತ್ತಿದೆ. ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳು ಇದರ ಅರಿವು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಯಾವುದೇ ಒಬ್ಬ ವೈದ್ಯ ಸೇವಾ ಮನೋಭಾವದಿಂದ ವೃತ್ತಿಗೆ ಸೇರಬೇಕು. ಹಣಗಳಿಕೆ ಮಾಡುವ ಉದ್ದೇಶಕ್ಕೆ ಸೇವೆ ಸಲ್ಲಿಸಿದರೆ ಸಮಾಜದಲ್ಲಿ ಗೌರವ ಸಿಗುವುದಿಲ್ಲ. ವೈದ್ಯಕೀಯ ಕ್ಷೇತ್ರದಲ್ಲೂ ಅನೇಕ ವಿಭಾಗಗಳು ಇವೆ. ವಿದ್ಯಾರ್ಥಿಗಳು ಪದವಿಗೆ ಸೇರುವ ಮೊದಲು ಜನಕ್ಕೆ ಉಪಯೋಗುವ ವಿಭಾಗ ಆಯ್ಕೆ ಮಾಡಿಕೊಳ್ಳಬೇಕು. ಈಗ ವೇದಿಕೆ ಇರುವ ವೈದ್ಯಕೀಯ ವಿಭಾಗವನ್ನು ಆಯ್ಕೆ ಮಾಡಿಕೊಂಡರೆ ಉತ್ತಮ ಎಂದರು. ಯೋಗಾಭ್ಯಾಸದಿಂದ ಮಿದುಳಿನ ನರಕೋಶಗಳು ಚುರುಕಾಗಿ ಕೆಲಸ ಮಾಡುತ್ತವೆ. ಯೋಗದಿಂದ ಆಗುವ ಉಪಯೋಗಗಳ ಬಗ್ಗೆ ಅಧ್ಯಯನ ನಡೆಸಲು ನಿಮ್ಹಾನ್ಸ್‌ನಲ್ಲಿ ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಲಾಗಿದ್ದು, ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ ಎಂದರು.

'ಈಗ ಯೋಗ ಅಭ್ಯಾಸವು ಹಲವು ಕಾಯಿಲೆಗಳಿಗೆ ಔಷಧಿಯಾಗಿದೆ. ಆಧುನಿಕ ಹಾಗೂ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳಲ್ಲಿ ತೊಡಗಿಸಿಕೊಂಡಿರುವ ಕೆಲ ವೈದ್ಯರು ನಾವೇ ಶ್ರೇಷ್ಠ ಎಂದು ಭಾವಿಸಿಕೊಳ್ಳುತ್ತಿದ್ದಾರೆ. ಎಲ್ಲ ಪದ್ಧತಿಗಳ ಮೂಲಕ ಉದ್ದೇಶ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದೇ ಆಗಿದೆ. ಚಿಕಿತ್ಸಾ ಪದ್ಧತಿ ಯಾವುದೇ ಇರಲಿ, ಎಲ್ಲರನ್ನು ವೈದ್ಯರೆಂದೇ ಪರಿಗಣಿಸಬೇಕು' ಎಂದು ಸಲಹೆ ನೀಡಿದರು. ಆರ್.ಎಲ್.ಜಾಲಪ್ಪ ಅವರು ಶೈಕ್ಷಣಿಕ, ಆರೋಗ್ಯ ಸೇವೆ ನೀಡುತ್ತಿರುವ ಮೂಲಕ ಜನರ ಮನೆಮಾತಾಗಿದ್ದಾರೆ. ಅವರು ನೀಡಿರುವ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗ 'ಪಡಿಸಿಕೊಳ್ಳುವ' ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

ಘಟಿಕೋತ್ಸವದಲ್ಲಿ 217 ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಡಾ|| ಹರ್ಷಿತ್‌ಗೌಡ ಅವರು ಪ್ರಮಾಣ ಪತ್ರ ಪಡೆದರು. ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್, ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಉಪ ಕುಲಪತಿ (ಪ್ರಭಾರ) ಡಾ.ಎ.ವಿ.ಎಂ.ಕುಟ್ಟಿ, ಕುಲಸಚಿವ ಡಾ.ಕೆ.ಎನ್.ವಿ.ಪ್ರಸಾದ್, ಸಂಸ್ಥೆಯ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸಿ.ಮುನಿನಾರಾಯಣ ಹಾಜರಿದ್ದರು.

ವಿಧ ಪ್ರೌಢಶಾಲೆಗಳಿಗೆ ಭೇಟಿ–ಪರಿಶೀಲನೆ

ಅಂತರಗಂಗೆ



ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ 9ನೇ ವಾರ್ಷಿಕ ಘಟಿಕೋತ್ಸವ

## ಡಿಜಿಟಲ್ ಆರೋಗ್ಯಕ್ಕೆ ಒತ್ತು ನೀಡಲು ವೈದ್ಯರಿಗೆ ಡಾ.ಬಿ.ಎನ್.ಗಂಗಾಧರ್ ಕರೆ



ಅಂತರಗಂಗೆ ಸುದ್ದಿ

ಕೋಲಾರ.ಮಾ.23– ರೋಗಿಗಳಿಗೆ ಡಿಜಿಟಲ್ ಚಿಕಿತ್ಸೆ ನೀಡಲು ಒತ್ತು ನೀಡಿದಾಗ ಬೇಗ ಗುಣಮುಖರಾಗಲು ಸಹಕಾರಿಯಾಗಲಿದ್ದು, ಇದಕ್ಕೆ ವೈದ್ಯರು ಒತ್ತು ನೀಡಬೇಕಾದ ಅಗತ್ಯವಿದೆ ಎಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ನಿರ್ದೇಶಕ ಡಾ.ಬಿ.ಎನ್. ಗಂಗಾಧರ್ ತಿಳಿಸಿದರು.

ನಗರದಲ್ಲಿ ದೇವರಾಜ ಅರಸು ವೈದ್ಯಕೀಯ ಮಹಾ ವಿದ್ಯಾಲಯದಿಂದ ನಡೆದ ಸಂಸ್ಥೆಯ 9ನೇ ವಾರ್ಷಿಕ ಘಟಿಕೋತ್ಸವದಲ್ಲಿ ಮಾತನಾಡಿ, ಸದ್ಯಕ್ಕೆ ಕೆಲ ಆಸ್ಪತ್ರೆಗಳಲ್ಲಿ ಡಿಜಿಟಲ್ ಚಿಕಿತ್ಸೆ ನಡೆಯುತ್ತಿದ್ದು, ಸಾರ್ವಜನಿಕರಿಂದಲೂ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ ಎಂದರು.

ಡಿಜಿಟಲ್ ಆರೋಗ್ಯದ ಬಗ್ಗೆ ಈಗಲೂ ಕೆಲವು ವೈದ್ಯರು ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ಸ್ಥಳೀಯ ಆಸ್ಪತ್ರೆಯಲ್ಲಿ ಕುಳಿತು ಕೊಂಡು ಆನ್‌ಲೈನ್ ಮೂಲಕ ತಜ್ಞರನ್ನು ಸಂಪರ್ಕಿಸಿ ರೋಗಿಗೆ ಚಿಕಿತ್ಸೆ ನೀಡುವುದರಿಂದ ಕಾಯಿಲೆ ನಿವಾರಣೆ ಯಾಗುತ್ತದೆ. ಈ ಚಿಕಿತ್ಸೆ ಸುಲಭವಾಗಿಯೂ ಸಿಗುತ್ತದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಪ್ರತಿ ಕ್ಷೇತ್ರದಲ್ಲೂ ಸಾಕಷ್ಟು ಮುಂದುವರೆದಿದೆ. ವೈದ್ಯಕೀಯ ಕ್ಷೇತ್ರದಲ್ಲೂ ತಂತ್ರಜ್ಞಾನ ಬಳಕೆ ಮಾಡಿ ಹೊಸ ಹೊಸ ಆವಿಷ್ಕಾರ, ಸಂಶೋಧನೆಗಳಿಗೆ ಅನುವು ಮಾಡಿಕೊಡಲಾಗುತ್ತಿದೆ. ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳು ಇದರ ಅರಿವು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಯಾವುದೇ ಒಬ್ಬ ವೈದ್ಯ ಸೇವಾ ಮನೋಭಾವದಿಂದ ವೃತ್ತಿಗೆ ಸೇರಬೇಕು. ಹಣಗಳಿಕೆ ಮಾಡುವ ಉದ್ದೇಶಕ್ಕೆ ಸೇವೆ ಸಲ್ಲಿಸಿದರೆ ಸಮಾಜದಲ್ಲಿ ಗೌರವ ಸಿಗುವುದಿಲ್ಲ. ವೈದ್ಯಕೀಯ ಕ್ಷೇತ್ರದಲ್ಲೂ ಅನೇಕ ವಿಭಾಗಗಳು ಇವೆ. ವಿದ್ಯಾರ್ಥಿಗಳು ಪದವಿಗೆ ಸೇರುವ ಮೊದಲು ಜನಕ್ಕೆ ಉಪಯೋಗುವ ವಿಭಾಗ ಆಯ್ಕೆ ಮಾಡಿಕೊಳ್ಳಬೇಕು. ಈಗ ಬೇಡಿಕೆ ಇರುವ ವೈದ್ಯಕೀಯ ವಿಭಾಗವನ್ನು ಆಯ್ಕೆ ಮಾಡಿಕೊಂಡರೆ ಉತ್ತಮ ಎಂದರು.

ಯೋಗಾಭ್ಯಾಸದಿಂದ ಮಿದುಳಿನ ನರಕೋಶಗಳು ಚುರುಕಾಗಿ ಕೆಲಸ ಮಾಡುತ್ತವೆ. ಯೋಗದಿಂದ ಆಗುವ ಉಪಯೋಗಗಳ ಬಗ್ಗೆ ಅಧ್ಯಯನ ನಡೆಸಲು ನಿಮ್ಹಾನ್ಸ್‌ನಲ್ಲಿ ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಲಾಗಿದ್ದು, ಸಾರ್ವಜನಿಕರು ಇದರ ಪ್ರಯೋಜನೆ ಪಡೆದುಕೊಳ್ಳುತ್ತಿದ್ದಾರೆ ಎಂದರು.

"ಈಗ ಯೋಗ ಅಭ್ಯಾಸವೂ ಹಲವು ಕಾಯಿಲೆಗಳಿಗೆ ಔಷಧಿಯಾಗಿದೆ. ಆಧುನಿಕ ಹಾಗೂ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಗಳಲ್ಲಿ ತೊಡಗಿಸಿಕೊಂಡಿರುವ ಕೆಲ ವೈದ್ಯರು ನಾವೇ ಶ್ರೇಷ್ಠ ಎಂದು ಭಾವಿಸಿಕೊಳ್ಳುತ್ತಿದ್ದಾರೆ. ಎಲ್ಲ ಪದ್ಧತಿಗಳ ಮೂಲಕ ಉದ್ದೇಶ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದೇ ಆಗಿದೆ. ಚಿಕಿತ್ಸಾ ಪದ್ಧತಿ ಯಾವುದೇ ಇರಲಿ, ಎಲ್ಲರನ್ನು ವೈದ್ಯರೆಂದೇ ಪರಿಗಣಿಸಬೇಕು" ಎಂದು ಸಲಹೆ ನೀಡಿದರು.

ಆರ್.ಎಲ್.ಜಾಲಪ್ಪ ಅವರು ಶೈಕ್ಷಣಿಕ, ಆರೋಗ್ಯ ಸೇವೆ ನೀಡುತ್ತಿರುವ ಮೂಲಕ ಜನರ ಮನೆ ಮಾತಾಗಿದ್ದಾರೆ. ಅವರು ನೀಡಿರುವ ಅವಕಾಶವನ್ನು ವಿದ್ಯಾರ್ಥಿಗಳು ಸದುಪಯೋಗ ಪಡಿಸಿಕೊಳ್ಳುವ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

ಘಟಿಕೋತ್ಸವದಲ್ಲಿ 217 ವೈದ್ಯಕೀಯ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಸಂಸ್ಥೆಯ ಕುಲಪತಿ ಡಾ.ಎಸ್.ಕುಮಾರ್, ಉಪಾಧ್ಯಕ್ಷ ರಾಜೇಶ್ ಎನ್.ಜಗದಾಳೆ, ಉಪ ಕುಲಪತಿ (ಪ್ರಭಾರ) ಡಾ.ಎ.ವಿ.ಎಂ. ಕುಟ್ಟಿ, ಕುಲಸಚಿವ ಡಾ.ಕೆ.ಎನ್.ವಿ. ಪ್ರಸಾದ್, ಸಂಸ್ಥೆಯ ಪರೀಕ್ಷಾ ನಿಯಂತ್ರಣಾಧಿಕಾರಿ ಡಾ.ಸಿ.ಮುನಿ ನಾರಾಯಣ ಹಾಜರಿದ್ದರು.

## ಕೆ.ಸಿ ರೆಡ್ಡಿ ಕಾಲೇಜಿನಲ್ಲಿ ಸ್ವೀಪ್ ಕಾರ್ಯಕ್ರಮ



ಬಂಗಾರಪೇಟೆ. ಮಾ.23– ಪುರಸಭೆ ವತಿಯಿಂದ ಸೂಲಿಕುಂಟೆ ರಸ್ತೆಯಲ್ಲಿರುವ ಕೆ.ಸಿ ರೆಡ್ಡಿ ಕಾಲೇಜಿನಲ್ಲಿ ಸ್ವೀಪ್ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ವಿದ್ಯಾರ್ಥಿಗಳಿಗೆ ನೈತಿಕ ಮತದಾನ, ಕಡ್ಡಾಯವಾಗಿ ಮತದಾನ ಮಾಡುವ ಬಗ್ಗೆ ಮತ್ತು ಮತದಾನದ ಮಹತ್ವವನ್ನು ಪುರಸಭೆ ಸಮುದಾಯ ಸಂಘಟನಾಧಿಕಾರಿ ಎಸ್.ಎಂ.ವೆಂಕಟೇಶ್ ಮಾಹಿತಿ ನೀಡಿದರು. ಮುಖ್ಯಾಧಿಕಾರಿ ವಿ.ಶ್ರೀಧರ್ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಾಂಶುಪಾಲ ಮುನಿಶಾಮಪ್ಪ ಮತದಾನ ಮಾಡುವ ಬಗ್ಗೆ ಅರಿವು ಮೂಡಿಸಿದರು.